ಕಾದಂಬರಿಗಳ ಪಾತ್ರಗಳು) ಟೀಕೆಗೆ ಒಳಗಾದ ಪಾತ್ರಗಳು. ವರ್ಜಿಲ್ (ರೋಮನ್ ಕವಿ), ಹೋಮರ್ (ಇಟಾಲಿಯನ್ ಕವಿ) ಅಥವಾ ಡಾಂಟೆಯಲ್ಲಿ (ಗ್ರೀಕ್ ಕವಿ) ನೀವಿದನ್ನು ಕಾಣಲಾರಿರಿ. ಮಹಾಕಾವ್ಯದ ನಾಯಕರು ಗಟ್ಟಿ ಪಾತ್ರಗಳು; ಕಾದಂಬರಿಯ ಪಾತ್ರಗಳು ಸಂದಿಗ್ಧತೆಯಲ್ಲಿರುವಂತಹವು. ಈ ಎರಡು ವಿರುದ್ಧ ಧ್ರುವಗಳಾದ ವಿಮರ್ಶೆ ಮತ್ತು ಮಹಾಕಾವ್ಯದ ಸಂಯೋಜನೆಯೇ ಕಾದಂಬರಿ.

◆ 'ದ ಮಂಕಿ ಗ್ರಾಮರಿಯನ್' ಬಗ್ಗೆ ಏನು ಹೇಳುವಿರಿ?

ಅದನ್ನು ಕಾದಂಬರಿ ಎನ್ನಲಾರೆ. ಕಾದಂಬರಿಗೆ ಹತ್ತಿರವಾದದ್ದು, ಅಷ್ಟೇ. ಅದೊಂದು ರೀತಿ **anti–novel** ಎನ್ನಬಹುದು. ಯಾವಾಗೆಲ್ಲಾ ಕಾದಂಬರಿ ಬರೆಯಬೇಕು ಅಂತ ಆಸೆ ಆಗುತ್ತೋ ಆಗೆಲ್ಲ 'ಕವಿಗಳು ಕಾದಂಬರಿಕಾರರಲ್ಲ' ಅಂತ ಹೇಳಿಕೊಳ್ಳುತ್ತಿರುತ್ತೇನೆ. ಗೋಥೆಯಂತಹ ಕೆಲವು ಕವಿಗಳು ಕಾದಂಬರಿ ಬರೆದಿದ್ದಾರೆ. ಆದರೆ, ಅವು ಬೋರಿಂಗ್ ಆಗಿವೆ. ಕಾವ್ಯಾತ್ಮಕ ಪ್ರತಿಭೆ ಸಂಶ್ಲೇಷಣೆ ಮಾದರಿಯದು. ಕವಿ ಸಂಶ್ಲೇಷಣೆ ಮಾಡಿದರೆ ಕಾದಂಬರಿಕಾರ ವಿಶ್ಲೇಷಣೆ ಮಾಡುತ್ತಾನೆ.

◆ ನಿಮ್ಮ ಹಾಗೂ ಪಾಬ್ಲೊ ನೆರೂಡ ಸಂಬಂಧದ ಬಗ್ಗೆ ಹೇಳಿ.

ಮೂವತ್ತರ ಹರೆಯದಲ್ಲಿ ಆಧುನಿಕ ಕಾವ್ಯವನ್ನು ಓದಿದಾಗ ನೆರೂಡ ಕಾವ್ಯ ಹೊಸಪ್ರಪಂಚವನ್ನು ತೋರಿಸಿತ್ತು. ನನ್ನ ಮೊದಲ ಪುಸ್ತಕವನ್ನು ಪ್ರಕಟಿಸಿದಾಗ ಒಂದು ಕಾಪಿ ಕಳುಹಿಸಿದ್ದೆ. ಅವರು ಉತ್ತರಿಸಲಿಲ್ಲ. ಆದರೆ, ಸ್ಪೇನ್‌ನ ಕಾಂಗ್ರೆಸ್‌ಗೆ ನನ್ನನ್ನು ಆಹ್ವಾನಿಸಿದರು. 1937ರಲ್ಲಿ ಪ್ಯಾರಿಸ್‌ಗೆ ಹೋದಾಗ ಅಲ್ಲಿ ಪರಿಚಿತರಿರಲಿಲ್ಲ. ರೈಲು ಇಳಿಯುತ್ತಿದ್ದಂತೆ ಎತ್ತರಕ್ಕಿದ್ದ ವ್ಯಕ್ತಿಯೊಬ್ಬರು "ಅಕ್ಟೇವಿಯಾ ಪಾಜ್! ಅಕ್ಟೇವಿಯಾ ಪಾಜ್!" ಎಂದು ಕೂಗುತ್ತ ಸಮೀಪಿಸಿದರು. ಅವರೇ ನೆರೂಡ. **"Oh you are so young!"** ಎಂದು ಅಪ್ಪಿಕೊಂಡರು. ಹೋಟೆಲ್ ಹುಡುಕಿಕೊಟ್ಟರು. ಆಮೇಲೆ, ನಾವಿಬ್ಬರೂ ಒಳ್ಳೆಯ ಸ್ನೇಹಿತರಾದೆವು. ಅವರು ನನ್ನ ಕಾವ್ಯವನ್ನು ಮೊದಲು ಗುರುತಿಸಿ ಸಹೃದಯತೆಯಿಂದ ಓದಿದವರು.

◆ ಹಾಗಾದರೆ, ಶ್ರುತಿ ತಪ್ಪಿದ್ದೆಲ್ಲಿ?

ಅವರು ಮೆಕ್ಸಿಕೊಗೆ ಬಂದಾಗ ಆಗಾಗ ಭೇಟಿ ಆಗುತ್ತಿದ್ದೆ. ಆದರೆ, ಅಲ್ಲಿ ಎರಡು ಸಮಸ್ಯೆಗಳಿದ್ದವು. ಮೊದಲನೆಯದು ವೈಯಕ್ತಿಕ ಸಮಸ್ಯೆ. ನೆರೂಡ ಬಹಳ ಉದಾರಿ ಜೊತೆಗೆ, ತನ್ನ ಮಾತೇ ನಡೆಯಬೇಕೆಂಬ ವ್ಯಕ್ತಿ. ನಾನು ಬಂಡುಕೋರ. ನನ್ನ ಸ್ವಾತಂತ್ರ್ಯ ಬಿಟ್ಟುಕೊಡುತ್ತಿರಲಿಲ್ಲ. ಅವರ ಸುತ್ತ ಆರಾಧಿಸುವವರ ಗುಂಪನ್ನು ಇಟ್ಟುಕೊಂಡಿರುತ್ತಿದ್ದರು. ಅವರಲ್ಲಿ ಬುದ್ಧಿವಂತರೊಂದಿಗೆ ಒಂದಷ್ಟು ಮಿಡಿಯೊಕರ್‌ಗಳು ಇದ್ದರು. ಎರಡನೆಯ ಸಮಸ್ಯೆ ರಾಜಕೀಯ. ಆತ ಸ್ಟಾಲಿನಿಸ್ಟ್ ಆಗುವತ್ತ ಸಾಗಿದರೆ ನಾನು ಸ್ಟಾಲಿನ್‌ನಿಂದ ದೂರ ಸರಿಯತೊಡಗಿದ್ದೆ. ಕಡೆಗೆ ಇಬ್ಬರಿಗೂ ಜಗಳವಾಗಿ ಕೈಕೈಮಿಲಾಯಿಸುವ ಹಂತಕ್ಕೆ ಹೋಯಿತು. ಇಬ್ಬರೂ ಮಾತಾಡುವುದನ್ನು ನಿಲ್ಲಿಸಿದೆವು. ಅವರು ನನ್ನ ಬಗ್ಗೆ ಕೆಟ್ಟ ಕವಿತೆಯೊಂದಿಗೆ ಏನೇನೋ ಬರೆದರು. ನಾನು ಕೂಡ ಅವರ ಬಗ್ಗೆ ಒಂದಷ್ಟು ಭಯಂಕರವಾಗಿ ಬರೆದೆ. ಅಷ್ಟೇ, ಮುಗಿಯಿತು.

◆ ಮತ್ತೆ ಒಂದಾಗಲಿಲ್ಲವೇ?

ಇಪ್ಪತ್ತು ವರ್ಷ ಪರಸ್ಪರ ಮಾತಾಡಲಿಲ್ಲ. ಕೆಲವೊಮ್ಮೆ ಇಬ್ಬರೂ ಒಂದೇ ಸಮಯದಲ್ಲಿ ಒಂದೇ ಜಾಗದಲ್ಲಿ ಇರುತ್ತಿದ್ದೆವು. ಇಬ್ಬರಿಗೂ ಸಮಾನ ಗೆಳೆಯರಾಗಿದ್ದವರಿಗೆ, "ಅವನು ದ್ರೋಹಿ